ಒಮ್ಮೆ ನನಗೆ ಮುಂಬಯಿಯ ಪ್ರತಿಷ್ಠಿತ ಪಂಚತಾರಾ ಹೋಟೆಲಿನಲ್ಲಿ ಉಳಿದುಕೊಳ್ಳುವ ಅವಕಾಶ ಸಿಕ್ಕಿತ್ತು. ನಾನು ಕೆಲಸ ಮಾಡುತ್ತಿರುವ ಸಂಸ್ಥೆ ಅದರ ವೆಚ್ಚ ಭರಿಸಿ, ಅಲ್ಲಿ ನಡೆಯುತ್ತಿರುವ ಕಾನ್ಫರೆನ್ಸ್‌ಗೆ ಕಳಿಸಿತ್ತು. ನನ್ನ ಮೊದಲ ಪಂಚತಾರಾ ಹೋಟೆಲ್ ಅನುಭವ. ಎಲ್ಲಾ ಮೊದಲ ಅನುಭವಗಳಂತೆ ಅದೂ ವಿಶೇಷವೇ ಆಗಿತ್ತು. ಬೆಳಿಗ್ಗೆ ಹೋಟೆಲಿನ ರಿಸೆಪ್ಶನ್ ಹತ್ತಿರ ಹೆಸರು, ವಿಳಾಸ ಸಹಿತ ಬೇಕು ಬೇಡವಾದ ಎಲ್ಲಾ ವಿವರಗಳನ್ನು ತುಂಬಿ ರೂಮಿನ ಕಾರ್ಡ್ ತೆಗೆದುಕೊಂಡದ್ದಾಯಿತು. ಆರನೇ ಮಹಡಿಯಲ್ಲಿನ ರೂಮಿಗೆ ಬಂದು ತಲುಪಿದೆ. ಅಲ್ಲಿನ ಮಂಚದ ಮೇಲೆ ಮೂರು ಕೆಂಪು ಗುಲಾಬಿ, ಎರಡು ಲಾಡು ಮತ್ತು ಒಂದು ಪತ್ರ ನನಗಾಗಿ ಕಾದು ಕುಳಿತಿದ್ದವು. ಹೂವುಗಳನ್ನು ಪಕ್ಕದಲ್ಲಿಟ್ಟು ಒಂದು ಕೈಯ್ಯಲ್ಲಿ ಲಾಡು ಮತ್ತೊಂದು ಕೈಯ್ಯಲ್ಲಿ ಪತ್ರವನ್ನು ಕೈಗೆತ್ತಿಕೊಂಡು ಓದಲು ಶುರು ಮಾಡಿದೆ.



ಮನೆಯಲ್ಲಿ ನಿಯಂತ್ರಿಸಲು ಸಾಧ್ಯವಾಗಲಿಲ್ಲ..!

'ಧೈರ್ಯಶಾಲಿಗಳೇ,

ಈ ಹೋಟೆಲನ್ನು ಆರಿಸಿಕೊಂಡಿದ್ದಕ್ಕಾಗಿ ತಮಗೆ ಏನು ಹೇಳಬೇಕೋ ನನಗೆ ಗೊತ್ತಾಗುತ್ತಿಲ್ಲ. ಮುಂಬಯಿಯಲ್ಲಿ ನೂರಾರು ಅದ್ಭುತವಾದ ಹೋಟೆಲುಗಳಿದ್ದರೂ, ಇದನ್ನೇ ಆಯ್ಕೆ ಮಾಡಿಕೊಂಡಿದ್ದೀರಿ ಅಂದರೆ ತಮ್ಮ ಧೈರ್ಯವನ್ನಂತೂ ಮೆಚ್ಚಲೇಬೇಕು...'

ಗ್ರಾಹಕರನ್ನು ಖುಷಿಪಡಿಸಲು ಪಂಚತಾರಾ ಹೋಟೆಲುಗಳು ಈ ಥರದ ಪತ್ರಗಳನ್ನು ಸ್ವಾಗತಕ್ಕಾಗಿ ಬಳಸುತ್ತವೆಯೇನೋ ಹೌದು ಆದರೆ, ಪತ್ರದ ಒಕ್ಕಣೆ ಹೀಗಿರಲಿಕ್ಕಿಲ್ಲ ಅಂತಾ ಊಹಿಸಲು ಅನುಭವ ಬೇಕಿಲ್ಲವಲ್ಲ!

'ಈ ಪತ್ರದ ಜೊತೆಗೆ ಲಾಡು ಇಟ್ಟಿದ್ದಾರೆ. ಕಡಲೆಹಿಟ್ಟಿನ ಸಣ್ಣ ಸಣ್ಣ ಗೋಲಗಳ ನಡುವೆ ಸಕ್ಕರೆ ಮಿಳಿತವಾಗಿರೋದನ್ನು ಗಮನಿಸಿ. ನಡುನಡುವೆ ಒಣ ದ್ರಾಕ್ಷಿ ಮತ್ತು ಗೋಡಂಬಿಗಳು ಇಣುಕುತ್ತವೆ. ಇವಕ್ಕೆಲ್ಲ ಕಳಶಪ್ರಾಯದಂತಿರುವ ಘಮ್ಮೆನ್ನುವ ತುಪ್ಪದ ವಾಸನೆ. ಆಹಾ, ನೋಡಿಯೇ ಸವಿಯಬೇಕು. ಅದೇ ಸರಿ; ಯಾಕೆಂದರೆ, ಮೊನ್ನೆ ಹೀಗೆಯೇ ಒಬ್ಬರು ಲಾಡು ತಿಂದು ಮೂರು ದಿನ ವಾಂತಿ ಭೇದಿಯಿಂದ ಬಳಲಿದ್ದಾರೆ. ಮುಂದೆ ಒಂದು ವಾರ ಅವರು ಕಟ್ಟುನಿಟ್ಟಿನ ಡಯಟ್‌ನಲ್ಲಿರಬೇಕಾಯಿತು. ಅದರಿಂದ ಮೂರೂವರೆ ಕೆಜಿ ತೂಕ ಕಡಿಮೆಯಾಯಿತು. 'ತಾನು ಎಷ್ಟು ಹೇಳಿದರೂ ತೂಕ ಕಡಿಮೆ ಮಾಡಿಕೊಳ್ಳದ ಅವರನ್ನು ನಿಮ್ಮ ಹೋಟೆಲು ಸುಲಭವಾಗಿ ತೂಕ ಕಡಿಮೆ ಮಾಡಿಸಿತು ಅದಕ್ಕಾಗಿ ತುಂಬಾ ಧನ್ಯವಾದ...' ಅಂತಾ ಅವರ ಹೆಂಡತಿ ನಮ್ಮ ಹೋಟೆಲನ್ನು ಶ್ಲಾಘಿಸಿ, ಫೋನು ಮಾಡಿದ್ದರು. ಇದರಲ್ಲಿ ನಮ್ಮದೇನೂ ಹೆಚ್ಚುಗಾರಿಕೆಯಿಲ್ಲ ಅಂತಾ ಹೇಳಿದೆವು. ನಾವು ಈ ಥರದ ಸಹಾಯ ಮಾಡಿದ್ದರಿಂದ ಜಿಮ್‌ಗೆ ನಷ್ಟವಾದರೂ ನಾವು ಮುಂದೆಯೂ ಹೀಗೆಯೇ ಸಮಾಜ ಸೇವೆಯನ್ನು ಮಾಡುತ್ತಿರುತ್ತೇವೆ'. ಇನ್ನೇನು ಲಾಡುವನ್ನು ಬಾಯಿಗಿಟ್ಟುಕೊಳ್ಳಬೇಕು ಅನ್ನುವಷ್ಟರಲ್ಲಿ ಈ ಸಾಲುಗಳು ಕಣ್ಣಿಗೆ ಬಿದ್ದವು. ಕೈ ತಾನಾಗಿಯೇ ಲಾಡುವನ್ನು ಪಕ್ಕಕ್ಕಿಟ್ಟು ಬಿಟ್ಟಿತು.

ಇವುಗಳನ್ನು ಶುಚಿರ್ಭೂತವಾದ, ಸುಸಜ್ಜಿತವಾದ ನಮ್ಮ ಕಿಚನ್‌ನಲ್ಲಿಯೇ ತಯಾರಿಸಿದ್ದು. ನಮ್ಮ ಹೋಟೆಲಿನ ಪಾಲಿಸಿ ಪ್ರಕಾರ ನಾವು ಯಾವುದೇ ಜಾತಿ, ಧರ್ಮ, ಕೋಮಿನ ತಾರತಮ್ಯವಿಲ್ಲದೆ ಎಲ್ಲರಿಗೂ ಇರಲು ಅವಕಾಶ ಮಾಡಿಕೊಡುತ್ತೇವೆ. ಇದರ ಅತೀ ಕಟ್ಟುನಿಟ್ಟಾದ ಆಚರಣೆ ನಿಮಗೆ ಕಿಚನಿನಲ್ಲಿ ಕಾಣಸಿಗುತ್ತದೆ. ಅಲ್ಲಿ ಮನುಷ್ಯರ ಜೊತೆ ಜಿರಳೆ, ಇಲಿ, ಹೆಗ್ಗಣಗಳು ಎಷ್ಟು ಅನ್ಯೋನ್ಯವಾಗಿ ಜೀವನ ಮಾಡುತ್ತಿವೆ ಅನ್ನೋದನ್ನು ನೋಡಿಯೇ ಅರಿತುಕೊಳ್ಳಬೇಕು. ಇಂಥ ಸಹಬಾಳ್ವೆ ಬೇರೆಯವರಿಗೆ ಮಾದರಿ. ಇರಲಿ, ನಮ್ಮ ಬಗ್ಗೆ ನಮಗೆ ಕೊಚ್ಚಿಕೊಳ್ಳೋಕ್ಕೆ ಇಷ್ಟವಿಲ್ಲವಾದ್ದರಿಂದ ಹೆಲ್ತ್ ಇನ್ಸ್‌ಪೆಕ್ಟರ್‌ಗಳು ಪರೀಕ್ಷೆಗೆ ಬಂದಾಗ ಇಂಥಾ ವಿಚಾರ 'ಹೊರಗೆ ಬರದಂತೆ' ನೋಡಿಕೊಳ್ಳುತ್ತೇವೆ. ಯಾವುದರ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದಾರೆ ಅನ್ನೋದು ನನಗೆ ತಿಳಿಯಲಿಲ್ಲ. ಪಾಪ ಲಾಡು ಮನಸ್ಸು ತಿನ್ನು ಅನ್ನುತ್ತಿತ್ತು, ಬುದ್ಧಿ ಬೇಡ ಅನ್ನುತ್ತಿತ್ತು. ಇಬ್ಬರ ಜಗಳದಲ್ಲಿ ನನಗೆ ನಷ್ಟ!

ಯಾಕೋ ಕಸಿವಿಸಿಯಾದಂತಾಗಿ ಪತ್ರವನ್ನು ಪಕ್ಕಕ್ಕಿಟ್ಟೆ. ಸ್ನಾನಕ್ಕೆ ಹೋಗಲು ತಯಾರಿ ಮಾಡಿಕೊಳ್ಳತೊಡಗಿದೆ. ಇನ್ನೇನು ಟವೆಲ್ ಹಿಡಿದುಕೊಂಡು ಸ್ನಾನಕ್ಕೆ ಹೊರಡಬೇಕು ಅನ್ನುವಷ್ಟರಲ್ಲಿ ಮತ್ತೆ ಪತ್ರ ಕೈಗೆತ್ತಿಕೊಂಡೆ. ಹಾಗೆ ಮಾಡಿದ್ದು ಒಳ್ಳೆಯದೇ ಆಯಿತು ಜೀವ ಉಳಿಯಿತು.

'... ನೀವು ಆಯಾಸಗೊಂಡಿರಬಹುದು. ಇಂಥ ಸಂದರ್ಭದಲ್ಲಿ ಬೆಚ್ಚನೆಯ ನೀರು, ಜೊತೆಗೆ ಪರಿಮಳಯುಕ್ತ ಸೋಪಿನ ನೊರೆ ಚರ್ಮದ ಮೇಲ್ಪದರು ಸೋಂಕಿದಾಗ ಆತ್ಮಕ್ಕೆ ಹಾಯೆನಿಸುತ್ತದೆ ಸ್ವರ್ಗದ ಅನುಭವ ನೀಡುವುದರಲ್ಲಿ ಸಂಶಯವೇ ಇಲ್ಲ. ಆದರೆ, ಹಾಗೇನಾದರೂ ಮಾಡೀರಾ ಜೋಕೆ. ಗೀಸರ್‌ನಲ್ಲಿ ತೊಂದರೆಯಾಗಿ ಅದರಿಂದ ಬರುವ ಬಿಸಿನೀರಿನಲ್ಲಿ ವಿದ್ಯುತ್ ಹರಿದು ಒಬ್ಬರು ಮೂರ್ಛೆ ತಪ್ಪಿದ್ದರು. ಸ್ವಲ್ಪವೂ ತಡಮಾಡದೇ, ಅವರು ಸಾಯುವ ಮೊದಲೇ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು ನಮ್ಮ ಹೋಟೆಲಿನ ಸರ್ವೀಸು ಅಷ್ಟು ಫಾಸ್ಟು. ಅವರು ಹಾಗೆ ಬೀಳುವ ಸಮಯದಲ್ಲಿ ನಲ್ಲಿ, ಗಾಜಿನ ಗೋಡೆಯನ್ನೆಲ್ಲ ಜಖಂ ಮಾಡಿದ್ದರೂ ಅವರಿಂದ ಒಂದು ಪೈಸೆಯನ್ನೂ ವಸೂಲಿ ಮಾಡಿಲ್ಲ. ಅಷ್ಟೇ ಅಲ್ಲದೆ, ಅವರು ಆಸ್ಪತ್ರೆಯಲ್ಲಿದ್ದ ಎಂಟೂ ದಿನ ನಮ್ಮ ಸಿಬ್ಬಂದಿಯೇ ಆಸ್ಪತ್ರೆಗೆ ಊಟ ತೆಗೆದುಕೊಂಡು ಹೋಗಿದ್ದರು. ಮೊದಲೆರಡು ದಿನ ತಿಂದರೂ ಆಮೇಲೆ ಯಾಕೋ ತೀವ್ರವಾದ ಫುಡ್ ಇನ್ಫೆಕ್ಷನ್ ಕಾರಣದಿಂದ ತಿನ್ನಲೇ ಇಲ್ಲ. ಆದರೂ, ನಮ್ಮ ಅತಿಥಿಗಳನ್ನು ನಾವು ಚೆನ್ನಾಗಿ ನೋಡಿಕೊಂಡೆವು ಅನ್ನುವ ಸಂತೃಪ್ತಿ ನಮಗಿದೆ...'

ನಾನು ಬದುಕಿಕೊಂಡೆ. ಓದಿರದಿದ್ದರೆ ಸ್ವರ್ಗದ ಅನುಭವ ಪಡೆಯಲು ಸೀದಾ ಸ್ವರ್ಗಕ್ಕೇ ಹೋಗಿಬಿಡುತ್ತಿದ್ದೆನೇನೋ! ಓದು ಮುಂದುವರೆಸಿದೆ.

'... ಆದರೆ, ನಮ್ಮ ಸರ್ವೀಸಿನ ಗೈರು ಫಾಯಿದೆ ತೆಗೆದುಕೊಳ್ಳುವ ಮಂದಿಗೇನೂ ಕಡಿಮೆಯಿಲ್ಲ. ಹೋದ ತಿಂಗಳಿನಲ್ಲಿ ಒಬ್ಬರು ನಾವಿಟ್ಟಿದ್ದ ಸಾಬೂನನ್ನು ಧಾರಾಳವಾಗಿ ಮೈಗೆಲ್ಲ ಹಾಕಿಕೊಂಡಿದ್ದಾರೆ. ಚರ್ಮ ಉರಿಯೋದಕ್ಕೆ ಶುರುವಾಗಿ ಕೊನೆಗೆ ಚರ್ಮದ ಮೇಲೆಲ್ಲಾ ಚಿಕ್ಕ ಚಿಕ್ಕ ಗುಳ್ಳೆಗಳು ಬಂದಿವೆ. ಅವರು ಕೂಡಲೇ ಟವೆಲ್ ಸುತ್ತಿಕೊಂಡು ಹೊರಗೆ ಬಂದು ದೊಡ್ಡ ರಂಪಾಟ ಮಾಡಿದ್ದಾರೆ. ಜೀವಕ್ಕೇನೂ ಅಪಾಯ ಇರುವುದಿಲ್ಲವಾದ್ದರಿಂದ ಇಂಥವರನ್ನೆಲ್ಲ ನಾವು ಆಸ್ಪತ್ರೆಗೆ ಸೇರಿಸುವುದಿಲ್ಲ. ಕನಿಷ್ಠ ಆರು ಜನರಿಗೆ ಆಗಬೇಕಾಗಿದ್ದ ಸಾಬೂನನ್ನು ಈ ಮಹಾನುಭಾವರು ತಾವೊಬ್ಬರೇ ಮೆತ್ತಿಕೊಂಡಿದ್ದಾರೆ. ಇದರಿಂದಾಗಿ ನಮಗಾದ ನಷ್ಟವನ್ನು ಮನ್ನಿಸಿದರೂ ಅವರು ರಂಪಾಟ ನಿಲ್ಲಿಸುತ್ತಿಲ್ಲ. ಕೊನೆಗೆ, ಸೆಕ್ಯೂರಿಟಿಯನ್ನು ಕರೆಸಿ, ಅವರನ್ನು ಸಕಲ ಸರ್ಕಾರಿ ಗೌರವದಿಂದ ಬೀಳ್ಕೊಡಬೇಕಾಯಿತು. ಕೆಲವರಿಗೆ ಪುಕ್ಕಟೆಯಾಗಿ ಸಿಗುವ ಎಲ್ಲವನ್ನೂ ಧಾರಾಳವಾಗಿ ಬಳಸುವ ಅಭ್ಯಾಸವಿರುತ್ತದೆ. ತಾವು ಅಂಥವರಲ್ಲ ಅಂತಾ ನಮಗೆ ಗೊತ್ತು'